# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 403 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉತ್ತರ ಕರ್ನಾಟಕವನ್ನು ದಕ್ಷಿಣ ಕರ್ನಾಟಕದ ಜೊತೆಗೆ ಸಂಪರ್ಕ ಬೆಸೆಯುವ ಯಾವುದೇ ಚತುಷ್ಪಥ ರಸ್ತೆಗಳೇ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು: ಇಂತಹ ಚತುಷ್ಪಥ ರಸ್ತೆ ನಿರ್ಮಾಣದ ಯಾವುದಾದರು ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ; | • ಉತ್ತರ ಕರ್ನಾಟಕವನ್ನು ದಕ್ಷಿಣ ಕರ್ನಾಟಕದ ಜೊತೆಗೆ ಸಂಪರ್ಕ ಬೆಸೆಯುವ ಚತುಷ್ಪಥ ರಸ್ತೆಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಅಧೀನದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ವಿವರ (2/4/6 ಪಥ) ಈ ಕೆಳಕಂಡಂತಿದೆ:<br>1) ರಾಷ್ಟ್ರೀಯ ಹೆದ್ದರಿ-50 (ಹಳೇ ಎನ್.ಹೆಚ್.13) ರಸ್ತೆಯು ಹೊಸಪೇಟೆಯಲ್ಲಿ ಕಿ.ಮೀ.299.00 ರಿಂದ ಆರಂಭವಾಗಿ ಚಿತ್ರದುರ್ಗದಲ್ಲಿ ಕಿ.ಮೀ.418.60 ರಲ್ಲಿ ಅಂತ್ಯವಾಗುತ್ತದೆ.<br>2) ರಾಷ್ಟ್ರೀಯ ಹೆದ್ದಾರಿ-48 ರಸ್ತೆಯ ಕಿ.ಮೀ. 10.00 (ಪೀಣ್ಯ) ರಿಂದ 592.85 (ಮಹಾರಾಷ್ಟ್ರ ಬಾರ್ಡರ್ ರಸ್ತೆಯು ಕರ್ನಾಟಕದಲ್ಲಿ ಹಾದುಹೋಗುತ್ತಿದ್ದು, ಇದರ ಒಟ್ಟು ಉದ್ದವು 582.85 ಕಿ.ಮೀ. ಇರುತ್ತದೆ.<br><br>• ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯ ಬೆಳಗಾವಿಗೆ ಸಂಬಂಧಿಸಿದಂತೆ 2025-26ನೇ ಸಾಲಿನ Annual plan ಕುರಿತು MORTH ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಯಲ್ಲಿ, ಕರ್ನಾಟಕದಲ್ಲಿ ಮುಂದಿನ 3 ವರ್ಷದಲ್ಲಿ ಈ ಕೆಳಗೆ ನಮೂದಿಸಿದ ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಚತುಷ್ಪಥ ಹೆದ್ದಾರಿಗಳನ್ನಾಗಿ ಅಭಿವೃದ್ಧಿ ಪಡಿಸುವ ಸಂಬಂಧ ವಿಸ್ತೃತ ಯೋಜನಾ ತಯಾರಿಕೆಗಾಗಿ ಪರಿಗಣಿಸಲು ಯೋಜನೆ ರೂಪಿಸಿರುತ್ತಾರೆ.<br>1) ವಿಜಯಪೂರದಿಂದ ಹುಬ್ಬಳ್ಳಿವರೆಗೆ ರಾಷ್ಟ್ರೀಯ ಹೆದ್ದಾರಿ-52 ರಲ್ಲಿ ಹೊನಗನಹಳ್ಳಿಯ ಕಿ.ಮೀ.74.135 ರಿಂದ ಹುಬ್ಬಳ್ಳಿಯ ಕಿ.ಮೀ.261.483 ವರೆಗೆ ಒಟ್ಟು 187.350 ಕಿ.ಮೀ. ಉದ್ದದ ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿ (DPR) ತಯಾರಿಸಲು MORTH ದಿಂದ ಟೆಂಡರನ್ನು ದಿನಾಂಕ:22.07.2025 ರಂದು ಕರೆಯಲಾಗಿದೆ.<br>2) ರಾಷ್ಟ್ರೀಯ ಹೆದ್ದಾರಿ-150ರ ಚೈನೇಜ್ 0.00 ಕಿ.ಮೀ ರಿಂದ 118.47 ಕಿ.ಮೀ.ವರೆಗೆ ರಸ್ತೆಯನ್ನು ದ್ವಿಪಥದಿಂದ ಚತುಷ್ಪಥ ನಿರ್ಮಾಣ ಮಾಡುವ ಕಾಮಗಾರಿಯ DPR ತಯಾರಿಸುವುದಕ್ಕಾಗಿ ಸಮಾಲೋಚಕರನ್ನು ನೇಮಿಸಲು ಟೆಂಡರ್ ಕರೆಯಬೇಕಾಗಿದೆ. |

| | | |
|---|---|---|
| | | • 2024–25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 300 ರಲ್ಲಿ ಬೀದರ್ ಹಾಗೂ ಬೆಂಗಳೂರು ನಡುವೆ ಎಕನಾಮಿಕ್ ಕಾರಿಡಾರ್ ಅನ್ನು ಅಭಿವೃದ್ಧಿ ಪಡಿಸಲು ಘೋಷಿಸಲಾಗಿರುತ್ತದೆ. |
| ಆ) | ಕರ್ನಾಟಕವನ್ನು ಬೆಸೆಯುವ ಉತ್ತರದಿಂದ ದಕ್ಷಿಣ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ ಬೀದರ್ ಚಾಮರಾಜನಗರ (ವಾಯಾ ಕಲಬುರಗಿ) ಹೆದ್ದಾರಿ "ಕಲ್ಯಾಣ ಪಥ" ಚತುಷ್ಪಥ ರಸ್ತೆ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಯಾವುದಾದರೂ ಪ್ರಸ್ತಾವನೆ ಸಲ್ಲಿಸಿದೆಯೇ; ಸಲ್ಲಿಸಿದ್ದಲ್ಲಿ, ಪ್ರಸ್ತಾವನೆ ಯಾವ ಹಂತದಲ್ಲಿದೆ? | ಪ್ರಸ್ತುತ ಬೀದರ್‌ನಿಂದ ಬೆಂಗಳೂರುವರೆಗೆ ಕಲ್ಯಾಣ ಕರ್ನಾಟಕ ಜಿಲ್ಲೆಗಳು ಒಳಗೊಂಡ ಎಕೊನೊಮಿಕ್ ಗ್ರೀನ್ ಫೀಲ್ಡ್ ಕಾರಿಡಾರ್ ಅಭಿವೃದ್ಧಿ ಕಾಮಗಾರಿಯ Inception report ಮತ್ತು Draft alignment report ತಯಾರಿಸಲಾಗುತ್ತಿದೆ. |
| ಇ) | ಈ ಹಿಂದೆ ರಾಜ್ಯ ಸರ್ಕಾರವು ಈ ಬೃಹತ್ ಚತುಷ್ಪಥ ಹೆದ್ದಾರಿ ಯೋಜನೆಗೆ ಅನುಮೋದನೆ ನೀಡಿದ್ದು, ರೂ.1000 ಕೋಟಿ ಅನುದಾನವನ್ನು ಮೀಸಲಿರಿಸಲಾಗಿದೆ ಎಂದು ತಿಳಿಸಿದ್ದು, ಆದರೆ ಇಲ್ಲಿಯವರೆಗೆ ಈ ಬಗ್ಗೆ ಯಾವುದೇ ಕಾಮಗಾರಿಗಳು ಪ್ರಾರಂಭಿಸದೇ ಇರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಈ "ಕಲ್ಯಾಣ ಪಥ" ಯೋಜನೆಯನ್ನು ಪ್ರಾರಂಭಿಸಿ ಮುಕ್ತಾಯಗೊಳಿಸಲಾಗುವುದು; (ಸಂಪೂರ್ಣ ಉತ್ತರವನ್ನು ಒದಗಿಸುವುದು) | |
| ಈ | ಈ ಯೋಜನೆಯ ವಿಸ್ತೃತ ಯೋಜನಾ ವರದಿಯ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವುದು? | |

ಕಡತ ಸಂಖ್ಯೆ: ಲೋಇ 313 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು